ಮುತ್ತು ನೇತಾಡುತ್ತಿರಬೇಕು. ಅಂತಹ ಟ್ರೆಂಡ್ ಈಗ ಬಂದಿದೆ.

**ರೌಂಡ್ ಶೇಪ್**

ಇದು ಅನಾದಿ ಕಾಲದಿಂದಲೂ ಬಳಕೆಯಲ್ಲಿದೆ. ಇದು ರೌಂಡ್ ಶೇಪ್‌ನಲ್ಲಿ ಎಲ್ಲಾ ತರದ ಒಡವೆ ಲಭ್ಯವಿರುತ್ತದೆ. ಗಾತ್ರ, ಗುಣಮಟ್ಟ ಹೊಂದಿಕೊಂಡು ಮೌಲ್ಯ ನಿರ್ಧಾರವಾಗುತ್ತದೆ. ಆಕಾರಕ್ಕೂ ಪ್ರಾಧಾನ್ಯತೆಯಿದೆ. ಗುಂಡಾಗಿ ನುಣುಪಾಗಿದ್ದು ಹೊಳಪು ಜಾಸ್ತಿ ಇದ್ದಷ್ಟೂ ಉತ್ತಮವಾದ ಮುತ್ತು ಎಂದರ್ಥ.

**ಚಪ್ಪಟೆ ಆಕಾರದ್ದು**

ಇದು ವಿಶೇಷವಾದ ಒಂದು ಆಕಾರ. ಫ್ಯಾಷನ್ ಆಭರಣಗಳಿಗೆ ಅಲ್ಲಲ್ಲಿ ಚೈನುಗಳಲ್ಲಿ, ಪದಕಗಳಲ್ಲಿ ಯಸ್ ಹುಕ್ ಹೊಂದಿದ ಕಿವಿಯೋಲೆಗಳಿಗೆ ಅಂದವಾಗಿ ಒಪ್ಪುತ್ತದೆ. ಇದರಲ್ಲೂ ಚೌಕ, ತ್ರಿಕೋನ, ಓವಲ್.. ಹೀಗೆ ಬೇರೆ ಬೇರೆ ಶೇಪ್ ಗಳು ಲಭ್ಯವಿದೆ.

ಮುತ್ತುಗಳನ್ನು ಗಾಂಚು ಸರಿಗೆಯಲ್ಲಿ ನೇಯ್ಗೆ ಮಾಡಬಹುದು, ಸರಿಗೆಯಲ್ಲಿ ಸುತ್ತಬಹುದು, ಕ್ಲೋಸ್ ಸೆಟ್ಟಿಂಗ್ ನಲ್ಲಿ ಅಳವಡಿಸಬಹುದು.





ಬಹು ಮುಖ್ಯವಾದ ಅಂಶ ಎಂದರೆ ಚಿನ್ನ ಅಥವಾ ಇನ್ನಾವುದೇ ಲೋಹ ದೊಂದಿಗಿರುವ ಮುತ್ತಿನ ಆಭರಣವನ್ನು ನೀರಿನಲ್ಲಿ ತೊಳೆಯಬಾರದು. ತೊಳೆದರೆ ಮುತ್ತು ಕಪ್ಪು ಬಣ್ಣಕ್ಕೆ ತಿರುಗುವ ಸಾಧ್ಯತೆಯಿದೆ.

**ಬಣ್ಣದ ಮುತ್ತುಗಳು**

ಮುತ್ತಿನಲ್ಲಿ ಆಭರಣದಲ್ಲಿ ಇನ್ನೂ ಶೋಭೆ ತರಬೇಕಾದರೆ ಅದರ ಜೊತೆಗೆ ಇನ್ನೂ ಕೆಲವು ರತ್ನಗಳನ್ನು ಅಳವಡಿಸಬಹುದು. ಮುತ್ತು ಮತ್ತು ರೂಬಿ, ಮುತ್ತು ಮತ್ತು ಪಚ್ಚೆ.. ಹೀಗೆ ಇದು ಬಹಳ ಹೊಂದಿಕೊಳ್ಳುತ್ತದೆ. ಮುತ್ತಿನ ಬಿಳಿ ಬಣ್ಣ, ರೂಬಿಯ ಕೆಂಪು ಬಣ್ಣ, ಚಿನ್ನದ ಹೊಳಪಿನ ಬಣ್ಣ ಮೂರು ಹಾಲು ಸಕ್ಕರೆಯಂತೆ ಬೆರೆತು ಆಭರಣ ನವ ವಿನ್ಯಾಸದಲ್ಲಿ ಮೂಡಿ ಬರುತ್ತದೆ.

ಮುತ್ತಿನೊಂದಿಗೆ ಹವಳವೂ ಒಪ್ಪವಾಗಿ ಹೊಂದಿಕೊಳ್ಳುತ್ತದೆ. ಹವಳದ ಇಟ್ಟಿಗೆ ಬಣ್ಣ ಮುತ್ತಿನ ಬಿಳಿ ಅಥವಾ ತಿಳಿ ಹಳದಿ ಬಣ್ಣದ ಆಭರಣಗಳು ಜರಿ ಸೀರೆಗಳಿಗೆ, ಕಾಟನ್ ಸೀರೆಗಳಿಗೆ ಟ್ರೆಡೀಷನಲ್ ಲುಕ್ ಕೊಡುತ್ತದೆ. ಸಾಂಪ್ರದಾಯಿಕ ಮದುವೆ, ಪೂಜೆ ಸಮಾರಂಭಗಳಿಗೆ ಇದು ಬಲು ಸೊಗಸು. ಕುಮಾರವ್ಯಾಸರ ಕಾವ್ಯ ಕನ್ನಿಕೆಯರ ವರ್ಣನೆಯ ನಾರಿಯಂತೆ ಭಾಸವಾಗುತ್ತದೆ. ರಾಜ ರಾಣಿಯರೂ ಎಷ್ಟೇ ಚಿನ್ನದ ಆಭರಣ ಧರಿಸಿದರೂ ಕೊನೆಯಲ್ಲಿ ಉದ್ದದ ಮುತ್ತನ್ನು ಒಳಗೊಂಡ ಹಾರವನ್ನು ಧರಿಸಿಯೇ ಧರಿಸುತ್ತಾರೆ. ರವಿವರ್ಮನ ಚಿತ್ರಗಳಲ್ಲೂ ನಾವು ಮುತ್ತಿನ ಆಭರಣಗಳನ್ನು ಕಾಣಬಹುದು.

ಮುತ್ತನ್ನು ನೂಲಿನ ಸಹಾಯದಿಂದ ಪೋಣಿಸಿ ಅಲ್ಲಲ್ಲಿ 'ಮಾಪ್'ಗಳನ್ನು ಅಳವಡಿಸಬಹುದು. ಆಗ ಸರ ನೀಟ್ ಆಗಿ ಚಪ್ಪಟೆಯಾಗಿ ನಿಂತು ಕುತ್ತಿಗೆಗೆ ಶೋಭೆ ನೀಡುತ್ತದೆ. 2 ಎಳೆ ಸರ, 4 ಎಳೆ ಸರದ ಹಾರಮ್ ಅವರವರ ಮನೋಭಾವಕ್ಕೆ ತಕ್ಕಂತೆ ವಿನ್ಯಾಸವನ್ನು ಆರಿಸಿಕೊಂಡು ಧರಿಸಬಹುದು. ಗಮನಿಸಬೇಕಾದ ಅಂಶ ಎಂದರೆ ಫ್ಲೆಕ್ಸಿಬಲ್ ಇರುವ ಸರಗಳು ಧರಿಸಲು ಹಿತ.

**ಮುತ್ತುಗಳಲ್ಲಿರುವ ವಿಧಗಳು:**

ನೈಸರ್ಗಿಕ ಮುತ್ತು ಸಮುದ್ರದಲ್ಲಿ ಅದಾಗಿ ಆಗುವ ಮುತ್ತು.

ಕಲ್ಚರ್ಡ್ ಪರ್ಲ್ 2 ವಿಧ (ಮಾನವ ಸಾಗುವಳಿಯಿಂದ)

ಉಪ್ಪು ನೀರಿನ ಕಲ್ಚರ್ಡ್ ಮುತ್ತು

ಸಿಹಿ ನೀರಿನ ಕಲ್ಚರ್ಡ್ ಮುತ್ತು

ಸಿಂಥೆಟಿಕ್ ಮುತ್ತು; ನೈಸರ್ಗಿಕ (ನ್ಯಾಚುರಲ್) ಮುತ್ತು

ಇದು ಸಮುದ್ರದ ಆಳದಲ್ಲಿ ಮೃದ್ವಂಗಿಗಳ ಚಿಪ್ಪಿನ ಒಳಗೆ ಅದಾಗಿ ಹುಟ್ಟಿ ಆಗುವಂತಹದ್ದು. ಯಾವುದಾದರೂ ಒಂದು ಚಿಕ್ಕ ಅಣು ದೇಹದ ಅಂದರೆ ಚಿಪ್ಪಿನ ಒಳಗೆ ಸೇರಿ ಅದರ ಸುತ್ತು ಮುತ್ತಿನ ತರದಲ್ಲಿ ಅದರ ದೇಹದಿಂದ ದ್ರವ ವಿಸರ್ಜನೆಯಾಗಿ ನೈಜವಾಗಿ ಮುತ್ತಿನ ಉದ್ಭವವಾಗುತ್ತದೆ. ಇಲ್ಲಿ ಗಮನಿಸ ಬೇಕಾದ ಅಂಶ ಎಂದರೆ ಕಸ ಯಾವ ರೀತಿಯಲ್ಲಿ ಇರುತ್ತದೆ. ಅದೇ ರೀತಿ ಮುತ್ತು ಆಗುತ್ತದೆ. ಶೇಪ್ ಅದಾಗಿ ಅದು ನಿರ್ಮಾಣವಾಗುತ್ತದೆ. ಮುತ್ತು ವೃತ್ತಾಕಾರವಾಗಿ ಎಷ್ಟು ಪದರದಲ್ಲಿ ನಿರ್ಮಾಣಗೊಂಡಿದೆ. ಎಂಬುದರ ಮೇಲೆ ಬೆಲೆ ನಿರ್ಧಾರವಾಗುತ್ತದೆ ಮತ್ತು ಗೋಲಾಕಾರವಾದ ದೊಡ್ಡ ಮುತ್ತಿಗೆ ಹೆಚ್ಚಿನ ಬೇಡಿಕೆ ಇದೆ. ಒಂದು ಗ್ರಾಂ ನ್ಯಾಚುರಲ್ ಮುತ್ತಿಗೆ ಒಂದು ಲಕ್ಷ ಬೆಲೆ ಇರುವ ಮುತ್ತೂ ಇದೆ. ಅಲ್ಲದೆ 2,000– 4000ದಿಂದ ಪ್ರಾರಂಭವಿರುತ್ತದೆ. ಒಂದು ಚಿಪ್ಪಿನೊಳಗೆ ಹಲವು ಮುತ್ತುಗಳು ಸಿಗುತ್ತವೆ. ಆದರೆ ಆಕಾರ, ದಪ್ಪ, ಭಾರ, ಅಳತೆಗಳು ಬೇರೆ ಬೇರೆ ಇರುತ್ತದೆ.

**ಕಲ್ಚರ್ಡ್ ಪರ್ಲ್; ಉಪ್ಪು ನೀರಿನ ಮುತ್ತು**

ಇದು ಸಮುದ್ರದ ಹಿನ್ನೀರಿನಲ್ಲಿ ತಡೆಗೋಡೆಗಳನ್ನು ಕಟ್ಟಿ ಮಾಡುವಂತ ಹದ್ದು. ಚಿಪ್ಪಿನ ಮೃದ್ವಂಗಿಗಳನ್ನು ಬೆಳೆಸುವುದು. ಮುತ್ತಿನ ಚಿಪ್ಪು ಮತ್ತು ದೇಹದ ಮಧ್ಯ ಮದರ್ ಆಫ್ ಪರ್ಲ್ ತುಣುಕನ್ನು ಸೇರಿಸಿದಾಗ ಮುತ್ತಿನ ಜೀವಿಯು ತನ್ನ ದೇಹದೊಳಗೆ ದೇಹ ರಕ್ಷಣೆಗಾಗಿ ದ್ರವವನ್ನು ಸೂಸಿದಾಗ ತುಣುಕಿನ ಸುತ್ತು ಆ ದ್ರವ ಸೇರಿ ಸೇರಿ ಮುತ್ತು ಉಂಟಾಗುತ್ತದೆ. ಇಲ್ಲಿ ಮಾನವ ಚಿಪ್ಪಿನ ತುಣುಕನ್ನು ವೃತ್ತಾಕಾರವಾಗಿ ಇರುವುದನ್ನೇ ಹಾಕುವುದ ರಿಂದ ಮುತ್ತು ವೃತ್ತಾಕಾರವಾಗಿ ನಿರ್ಮಾಣವಾಗುತ್ತದೆ. ಇದು ಮಾನವನ ಕೈಚಳಕ. ಈ ಮುತ್ತು ರೂ.150 ರಿಂದ ಪ್ರಾರಂಭವಾಗುತ್ತದೆ. ಒಳ್ಳೆಯ ಆಕಾರ ಹೊಂದಿದ ಮುತ್ತು ಆಗಬೇಕಾದರೆ 5 ವರ್ಷದ ಅವಧಿ ಬೇಕಾಗುತ್ತದೆ. ■